# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಡಾ:ವೈ.ಎ.ನಾರಾಯಣಸ್ವಾಮಿ, ರವರು ನಿಯಮ 72ರಡಿಯಲ್ಲಿ ಗಮನ ಸೆಳೆಯುವ ಸೂಚನೆಗೆ ಉತ್ತರ.

****

**ವಿಷಯ:** ಕೋಲಾರ ಜಿಲ್ಲೆಯ ಕೆರೆಗಳಿಗೆ ಸಂಸ್ಕರಿಸಿದ ನೀರನ್ನು ತುಂಬಿಸಲು ಕೆ.ಸಿ.ವ್ಯಾಲಿ ಯೋಜನೆಯನ್ನು ರೂಪಿಸಿ ಈ ಯೋಜನೆಗೆ ನೂರಾರು ಕೋಟಿ ರೂ.ಗಳನ್ನು ವೆಚ್ಚ ಮಾಡಿದ್ದರೂ ನಿರೀಕ್ಷಿತ ಪ್ರಮಾಣದಲ್ಲಿ ನೀರನ್ನು ಕೆರೆಗಳಿಗೆ ತುಂಬಿಸಲು ಆಗದಿರುವುದರಿಂದ ಈ ಯೋಜನೆ ಅಡಿಯಲ್ಲಿ ಬರುವ ಮೊದಲ ಹಂತದ ಕೆರೆಗಳನ್ನು ತುಂಬಿಸಲು ಆಗಿಲ್ಲ ಇದಕ್ಕೆ ಸಣ್ಣ ನೀರಾವರಿ ಇಲಾಖೆ ಮತ್ತು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಧ್ಯೆ ಸಮನ್ವಯದ ಕೊರತೆ ಇರುವುದರಿಂದ ಈ ಯೋಜನೆ ಕುಂಟುತ್ತಾ ಸಾಗಿರುವ ಗಂಭೀರ ವಿಚಾರದ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

********

**ಉತ್ತರ:**

ಕೆ & ಸಿ ವ್ಯಾಲಿ ಯೋಜನೆಯಡಿ ಬೆಂಗಳೂರು ನಗರದ ಕೋರಮಂಗಲ ಮತ್ತು ಚಲ್ಲಘಟ್ಟ ಹಾಗೂ ಬೆಳ್ಳಂದೂರು ಸಂಸ್ಕರಣ ಘಟಕಗಳಿಂದ ಒಟ್ಟು 400 ಎಂ.ಎಲ್.ಡಿ ದ್ವಿತೀಯ ಹಂತಕ್ಕೆ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಏತ ನೀರಾವರಿ ಮೂಲಕ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಒಟ್ಟು 126 ಕೆರೆಗಳಿಗೆ ತುಂಬಿಸಲು ಉದ್ದೇಶಿಸಲಾಗಿರುತ್ತದೆ.

ಸದರಿ ಕಾಮಗಾರಿಯ 6 ಲಿಫ್ಟ್‌ಗಳ ಪಂಪ್‌ಹೌಸ್ ಪೂರ್ಣಗೊಂಡಿದ್ದು, 5 ಪಂಪ್ ಹೌಸ್‌ಗಳನ್ನು ಚಾಲನೆ ಮಾಡಲಾಗಿದೆ ಯೋಜನೆಯ ರೈಸಿಂಗ್ ಮೇನ್ ಪೂರ್ಣಗೊಂಡಿರುತ್ತದೆ. ಕೆ.ಸಿ. ವ್ಯಾಲಿ ಯೋಜನೆಯನ್ನು 02-06-2018ರಂದು ಚಾಲನೆಗೊಳಿಸಲಾಗಿದೆ.

ಈ ಯೋಜನೆಯಲ್ಲಿನ 126 ಕೆರೆಗಳನ್ನು ತುಂಬಿಸಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವತಿಯಿಂದ 400.00 ಎಂ.ಎಲ್.ಡಿ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಪೂರೈಸಲು ಕರಾರು ಮಾಡಿಕೊಳ್ಳಲಾಗಿದ್ದು, ಪ್ರಸ್ತುತ ಬೆಂಗಳೂರು ನಗರದ ಸಂಸ್ಕರಣ ಘಟಕಗಳಿಂದ ಸರಾಸರಿ ದಿನಂಪ್ರತಿ 300.00 ಎಂ.ಎಲ್.ಡಿ.ನೀರನ್ನು ಕಳೆದ ಮೂರು ತಿಂಗಳುಗಳಿಂದ ಪಂಪು ಮಾಡಲಾಗುತ್ತಿರುತ್ತದೆ. ವಿವರಗಳು ಈ ಕೆಳಕಂಡಂತಿವೆ.

**ಬೆಂಗಳೂರು ನಗರ ನೀರು ಸರಬರಾಜು ಮಂಡಳಿಯ ಸಂಸ್ಕರಣಾ ಘಟಕಗಳಿಂದ ದಿನಂಪ್ರತಿ ಪಡೆಯುತ್ತಿರುವ ಸರಾಸರಿ ನೀರಿನ ಪ್ರಮಾಣದ ವಿವರಗಳು**

| | ಪ್ರಸ್ತುತ ಸ್ವೀಕರಿಸುತ್ತಿರುವುದು | ಬಾಕಿ ಪ್ರಮಾಣ ನೀಡಬೇಕಾಗಿರುವುದು |
|---|---|---|
| ಕೆ.ಸಿ ವ್ಯಾಲಿ ಸಂಸ್ಕರಣಾ ಘಟಕಗಳು | | |
| 218 ಎಂ.ಎಲ್.ಡಿ ಎಸ್.ಟಿ.ಪಿ | 173.00 | 47.00 |

| | | |
|---|---|---|
| 60 ಎಂ.ಎಲ್.ಡಿ ಎಸ್.ಟಿ.ಪಿ | 55.00 | 5.00 |
| 30 ಎಂ.ಎಲ್.ಡಿ ಎಸ್.ಟಿ.ಪಿ | 27.00 | 3.00 |
| ಬೆಳ್ಳಂದೂರು ಸಂಸ್ಕರಣಾ ಘಟಕ | | |
| 90 ಎಂ.ಎಲ್.ಡಿ ಎಸ್.ಟಿ.ಪಿ | 60.00 | 30.00 |
| **ಒಟ್ಟು** | 315.00 | 85.00 |

ಇಲ್ಲಿಯವರೆಗೆ ಒಟ್ಟು 7.10 ಟಿ.ಎಂ.ಸಿ.ನೀರನ್ನು ಪಂಪು ಮಾಡಲಾಗಿದ್ದು, 82 ಕೆರೆಗಳಿಗೆ ಮತ್ತು 113 ಚೆಕ್ ಡ್ಯಾಂಗಳಿಗೆ ಈಗಾಗಲೇ ತುಂಬಿಸಲಾಗಿದ್ದು, ಉಳಿದ ಕೆರೆಗಳ ಪೈಕಿ 9 ಕೆರೆಗಳಿಗೆ ನೀರು ಹರಿಸಲಾಗುತ್ತಿದೆ.

ಪ್ರಸ್ತುತ ಕೆ.ಸಿ ವ್ಯಾಲಿ ಮತ್ತು ಬೆಳ್ಳಂದೂರು ಸಂಸ್ಕರಣಾ ಘಟಕಗಳಿಂದ ಒಟ್ಟಾರೆಯಾಗಿ ದಿನಂಪ್ರತಿ ಸರಾಸರಿ 300.00 ಎಂ.ಎಲ್.ಡಿ.ಯಷ್ಟು ಸಂಸ್ಕರಿಸಿದ ನೀರನ್ನು ಸ್ವೀಕರಿಸಲಾಗುತ್ತಿದ್ದು, ನಿಗದಿತ ಪ್ರಮಾಣವಾದ 400.00 ಎಂ.ಎಲ್.ಡಿ.ಗೆ ಎದುರಾಗಿ 100 ಎಂ.ಎಲ್.ಡಿ ನೀರನ್ನು ಬೆಂಗಳೂರು ನೀರು ಸರಬರಾಜು ಒಳಚರಂಡಿ ಮಂಡಳಿಯು ನೀಡಬೇಕಾಗಿರುತ್ತದೆ.

ಸನ್ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:19-12-2019ರಂದು ಗೃಹ ಕಛೇರಿಯಲ್ಲಿ ಕೃಷ್ಣಾದಲ್ಲಿ ನಡೆದ ಸಭೆಯಲ್ಲಿ ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರು ಕೆ.ಸಿ ವ್ಯಾಲಿ ಯೋಜನೆಗೆ ಒಪ್ಪಂದದಂತೆ ಜುಲೈ-2020ರ ಅಂತ್ಯಕ್ಕೆ ಪೂರ್ಣಪ್ರಮಾಣದ 400.00 ಎಂ.ಎಲ್.ಡಿ ನೀರನ್ನು ನೀಡಲಾಗುವುದೆಂದು ಒಪ್ಪಿರುತ್ತಾರೆ. ತದನಂತರ ಸನ್ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು ರವರ ಅಧ್ಯಕ್ಷತೆಯಲ್ಲಿ ದಿನಾಂಕ : 23-04-2020 ರಂದು ನಡೆದ ಸಭೆಯಲ್ಲಿ ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರುರವರು ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಹೆಚ್ಚುವರಿ ನೀರನ್ನು ಒದಗಿಸಲು ಒಪ್ಪಿರುತ್ತಾರೆ. ನಂತರ, ದಿನಾಂಕ :23-06-2020ರಂದು ಸನ್ಮಾನ್ಯ ಮುಖ್ಯಮಂತ್ರಿಗಳವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರುರವರು ಅಕ್ಟೋಬರ್ 2020ರ ಅಂತ್ಯದೊಳಗೆ ಪೂರ್ಣಪ್ರಮಾಣದ 400 ಎಂ.ಎಲ್.ಡಿ. ನೀರನ್ನು ಒದಗಿಸಲಾಗುವುದೆಂದು ತಿಳಿಸಿರುತ್ತಾರೆ. ಆದರೆ, ಇಲ್ಲಿಯವರೆಗೆ ಪೂರ್ಣಪ್ರಮಾಣದ ನೀರನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರು ಒದಗಿಸಿರುವುದಿಲ್ಲ. ಯೋಜನೆಗೆ ಅವಶ್ಯವಾಗಿರುವ ಪೂರ್ಣಪ್ರಮಾಣದ 400.00 ಎಂ.ಎಲ್.ಡಿ ನೀರನ್ನು ಒದಗಿಸಿದ ನಂತರ ಈ ಯೋಜನೆ ಅಡಿಯಲ್ಲಿ ಉದ್ದೇಶಿಸಿರುವ ಎಲ್ಲಾ ಕೆರೆಗಳನ್ನು ತುಂಬಿಸಲು ಕ್ರಮ ವಹಿಸಲಾಗುತ್ತದೆ.

ದಿನಾಂಕ:25/01/2021ರಂದು ಬೆಂಗಳೂರು ಜಲಮಂಡಳಿ ವ್ಯವಸ್ಥಾಪಕ ನಿರ್ದೇಶಕರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಜಲಮಂಡಳಿ ಮತ್ತು ಸಣ್ಣ ನೀರಾವರಿ ಇಲಾಖೆಯ ಮಧ್ಯೆ ಸಂಸ್ಕರಿಸಿದ ತ್ಯಾಜ್ಯ ನೀರನ್ನು ನೀಡಲಾಗುತ್ತಿರುವುದರ ಪರಿಮಾಣದ ಬಗ್ಗೆ ವ್ಯತ್ಯಾಸವಿರುವುದರಿಂದ ಎರಡು ಇಲಾಖೆಗಳ ಮಧ್ಯೆ ವ್ಯತ್ಯಾಸವನ್ನು ಸರಿಪಡಿಸಲು ಐ.ಐ.ಎಸ್.ಸಿ ಮತ್ತು ಕೆ.ಇ.ಆರ್.ಎಸ್. ಸಂಸ್ಥೆ ಮತ್ತು ಸಣ್ಣ ನೀರಾವರಿ ಇಲಾಖೆ ಹಾಗೂ ಬೆಂಗಳೂರು ಒಳಚರಂಡಿ ಮಂಡಳಿ ವತಿಯಿಂದ ಜಂಟಿ ತಪಾಸಣೆ ಮಾಡಲು ತೀರ್ಮಾನಿಸಿದಂತೆ,

ದಿನಾಂಕ:29/01/2021ರಂದು ಮೇಲಿನ ಎಲ್ಲಾ ಇಲಾಖೆಯ ಪ್ರತಿನಿಧಿಗಳನ್ನೊಳಗೊಂಡ ತಂಡವು ಮೊದಲ ಹಂತದಲ್ಲಿ ಚಲಘಟ್ಟ ಎಸ್.ಟಿ.ಪಿ ಮತ್ತು ಬೆಳ್ಳಂದೂರು ಎಸ್.ಟಿ.ಪಿಗಳ ಪರಿವೀಕ್ಷಣೆ ನಡೆಸಲಾಗಿದೆ. ಮುಂಬರುವ ದಿನಗಳಂದು ಮೇಲಿನ ಎಲ್ಲಾ ಸಂಸ್ಥೆಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ಬೆಂಗಳೂರು ಕುಡಿಯುವ ನೀರು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಸಂಸ್ಕರಿಸಿದ ತ್ಯಾಜ್ಯ ನೀರನ್ನು (Treated Sewage Water) ನೀಡುತ್ತಿರುವ ಪ್ರಮಾಣದ ಬಗ್ಗೆ ನಿಖರವಾಗಿ ವರದಿ ನೀಡಲಾಗುವುದು.

ಅದರಂತೆ, ಸಣ್ಣ ನೀರಾವರಿ ಇಲಾಖೆ ಮತ್ತು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರ ಮಧ್ಯೆ ಸಮನ್ವಯತೆಯನ್ನು ಕಾಪಾಡಿಕೊಳ್ಳಲಾಗುವುದು.

**ಸಂಖ್ಯೆ: ಸನೀಇ 5 ವಿಪವಿ 2021.**

(ಜೆ.ಸಿ.ಮಾಧುಸ್ವಾಮಿ)
ಸಣ್ಣ ನೀರಾವರಿ ಸಚಿವರು.